ಶ್ರೀ ಎನ್. ಹುಚ್ಚಮಾಸ್ತಿಗೌಡ :—ಸರ್ಕಾರಕ್ಕೆ ಬರಬೇಕಾದ ದುಡ್ಡು ಎಷ್ಟು ? ಕೊಡಬೇಕಾದವರು ಯಾರ್ಯಾರು ಇದ್ದಾರೋ ಅಂಥವರಿಗೆ ವಿನಾಯಿತಿ ಕೊಡಬೇಕೆಂದು ತಮ್ಮ ಮೇಲೆ ಪ್ರಭಾವ ಬೀರುತ್ತಾ ಇರುವ ವರ್ತಮಾನ ಬಂದಿದೆ. ಆದರಲ್ಲಿ ಸತ್ಯಾಂಶವಿದೆಯೆ ?

ಶ್ರೀ ಎ. ಪಿ ಅಪ್ಪಣ್ಣ :—ಇದರಲ್ಲಿ ಕೆಲವನ್ನು ಹೈರ್ ಪರ್ಚೇಸ್ ಸಿಸ್ಟಂನಲ್ಲಿ ಕೊಟ್ಟಿದೆ. ಗ್ರಾಮಸ್ಥರಲ್ಲಿ ಕೆಲವರಿಗೆ ಲಾರಿ ಕೊಟ್ಟಿದ್ದಾರೆ. ವಾಲ್ಯುಯೇಷನ್ ನಿಗದಿಮಾಡಿರುವುದು ಸರಿಯಾಗಿಲ್ಲವೆಂದು ಅಪೀಲು ಬಂದಿವೆ. ಅವರಿಗೆ ಒಂದು ಅವಕಾಶವನ್ನು ಕೊಟ್ಟಿದ್ದೇವೆ. ಆದರೆ ಇಷ್ಟರವರೆಗೆ ಯಾವ ಒಂದು ಕಾರಣದಿಂದಲೂ ಮೊದಲು ಫಿಕ್ಸ್ ಮಾಡಿದಂಥ ವಾಲ್ಯುಯೇಷನ್ನನ್ನು ಕಡಿಮೆ ಮಾಡುವಂಥ ಆರ್ಡರನ್ನು ಸರ್ಕಾರ ಮಾಡಿಲ್ಲ. ವ್ಯಾಲ್ಯುಯೇಷನ್ ಸರಿಯಾಗಿಲ್ಲವೆಂದು ಈಗ ಅದನ್ನು ಬದಲಾವಣೆ ಮಾಡುವ ಸ್ಥಿತಿಯಲ್ಲಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಇದಕ್ಕೆ ಯಾರ ಪ್ರಭಾವ ಬಂದಿದೆ ?

ಶ್ರೀ ಎ. ಪಿ. ಅಪ್ಪಣ್ಣ :—ಪ್ರಭಾವ ನನ್ನ ಮೇಲೆ ಬಿದ್ದುದಲ್ಲ.

LEASING OUT MUNICIPAL BUS STAND'S TAXI SHEDS FOR RUNNING A CANTEEN IN MANGALORE.

374 SRI B. BHASKAR SHETTY (Kaup). —

Will the Minister of Statefor Municipal Administration be pleased to State.—

(*a*) whether the City Municipal Commissioner of Mangalore Municipality, recommended to the Government to accord permission to lease out the Municipal Bus Stands Taxi Sheds-measuring 80x 16ft for the purpose of running a canteen in fauour of a person on a daily rent of Rs. 16 only for a period of five years on 11th February 1969;

(*b*) whether the Sanction was accorded to the proposal of the said Municipal Commissioner by the Divisional Commissioner,

(*c*) the reasons why the Divisional Commissioner Mysore has accorded sanction to the proposal of the Municipal Commissioner which was made even before 11th February 1969 without consulting the newly constituted Municipal Council which came into being on 11th February 1969 which has powers to lease out upto a period of five years?

SRI B. M. PATIL (Minister of State for Municipal Administration).—

(*a*) No.

(*b*) Yes.

(*c*) The Divisional Commissioner in exercise of the powers delegated to him accorded sanction before the new Municipal Council was constituted.

ಶ್ರೀ ಬಿ. ಭಾಸ್ಕರಶೆಟ್ಟಿ :—ನಿಮ್ಮ ಡಿವಿಜನಲ್ ಕಮಿಷನರ್ ಅವರು ಮಂಜೂರಾತಿಯನ್ನು ಯಾವಾಗ ಕೊಟ್ಟರು?

† ಶ್ರೀ ಬಿ. ಎಂ. ಪಾಟೀಲ್ :—ಡಿವಿಜನಲ್ ಕಮಿಷನರ್ ಮಂಜೂರಾತಿ ಕೊಟ್ಟಿದ್ದು ೧೫ನೇ ಫೆಬ್ರವರಿ ೧೯೬೯ರಲ್ಲಿ.

ಶ್ರೀ ಬಿ. ಭಾಸ್ಕರಶೆಟ್ಟಿ :—ಅಲ್ಲಿನ ಜನಗಳಿಂದ ಟ್ಯಾಕ್ಸಿ ನಿಲ್ಲಿಸುವುದಕ್ಕೆ ಅಲ್ಲಿ ಸ್ಥಳವಿಲ್ಲವೆಂದು ಮನವಿ ಬಂದಿದೆಯೇ ?

ಶ್ರೀ ಬಿ. ಎಂ. ಪಾಟೀಲ್.—ಮೊದಲು ಅಲ್ಲಿ ಟ್ಯಾಕ್ಸಿ ಸ್ಟ್ಯಾಂಡ್ ಆಗಿತ್ತು ನಿಜ. ಟ್ಯಾಕ್ಸಿ ಸ್ಟ್ಯಾಂಡಾಗಿದ್ದರೂ ಆದನ್ನು ಉಪಯೋಗ ಮಾಡುತ್ತಿರಲಿಲ್ಲ. ಆದರಿಂದ ನಗರ ಸಭೆಗೆ ಒಂದು ಆದಾಯ ಬರುತ್ತದೆ. ಆದ್ದರಿಂದ ಅಲ್ಲಿ ಕಟ್ಟಡದ ಅವಶ್ಯಕತೆ ಇದೆಯೆಂದು ಡಿವಿಜನಲ್ ಕಮಿಷನರ್ ಅವರು ಒಪ್ಪಿಗೆ ಕೊಟ್ಟಿದ್ದಾರೆ

ಶ್ರೀ ಬಿ. ಭಾಸ್ಕರಶೆಟ್ಟಿ :—ಅಲ್ಲಿ ಪುರಸಭೆ ಅಧ್ಯಕ್ಷರು ಕಮ್ಯೂನಿಸ್ಟ್ ಆಗಿರುವುದರಿಂದ ಅವರ ಅಧಿಕಾರವನ್ನು ಹೇಗಾದರೂ ಮಾಡಿ ಕೆಳಗಿನ ಮಟ್ಟಕ್ಕೆ ತರಬೇಕೆಂದು ಅವರು ಅಧಿಕಾರದಲ್ಲಿರುವಾಗ ೧೧ನೇ ಫೆಬ್ರವರಿ ೧೯೬೯ರಲ್ಲಿ ಅದು ಅಸ್ತಿತ್ವಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಅದೇ ದಿವಸ ತಮ್ಮ ಕಮಿಷನರ್ ಅವರು ಮಂಜೂರಾತಿಗೆ ಕಳುಹಿಸಿದ್ದಾರೆ. ಅವರು ಪುರಸಭೆಯವರನ್ನು ಏಕೆ ಕೇಳಿ ಈ ಕೆಲಸವನ್ನು ಮಾಡಲಿಲ್ಲ.

ಶ್ರೀ ಬಿ. ಎಂ. ಪಾಟೀಲ್ :—ಪುರಸಭೆ ಆಗ ಫಂಕ್ಷನ್ ಮಾಡುತ್ತಿರಲಿಲ್ಲ. ಅದನ್ನು ಸಂಬಂಧಪಟ್ಟ ಅಧಿಕಾರಿಗಳು ಡಿವಿಜನಲ್ ಕಮಿಷನರ್ ಅವರಿಗೆ ಶಿಫಾರಸು ಮಾಡಿದ್ದಾರೆ. ಅದಕ್ಕೆ ಕಾನೂನು ಪ್ರಕಾರ ಸರ್ಕಾರದವರು ಒಪ್ಪಿಗೆ ಕೊಟ್ಟಿದ್ದಾರೆ.

ಶ್ರೀ ಬಿ. ಎಂ. ಇದಿನಬ್ಬ ;—ಡಿವಿಜನಲ್ ಕಮಿಷನರ್ ಕಾನೂನು ಪ್ರಕಾರ ಸಾಂಕ್ಷನ್ ಕೊಟ್ಟಿದ್ದಾರೆಯೇ ಎರಡನೆಯದು, ಟ್ಯಾಕ್ಸಿ ನಿರ್ಮಾಣಕ್ಕೆ ಸ್ಟ್ಯಾಂಡ್‌ಗೆ ಜಾಗವಿಲ್ಲವೆಂದು ಹೇಳುವ ಕಾಲದಲ್ಲಿ ಅವರಿಗೆ ಬೇರೆ ಏರ್ಪಾಡುಗಳನ್ನು ಮಾಡಿಕೊಡುತ್ತೀರಾ

ಶ್ರೀ ಬಿ ಎಂ. ಪಾಟೀಲ್ :—ಡಿವಿಜನಲ್ ಕಮಿಷನರ್ ಅವರು ಕಾನೂನು ಪ್ರಕಾರ ಕೊಟ್ಟಿದ್ದಾರೆ. ಅಲ್ಲಿ ಟ್ಯಾಕ್ಸಿ ಸ್ಟ್ಯಾಂಡ್ ಬಹಳ ಅವಶ್ಯಕತೆ ಇದೆಯೆಂದು ಹೇಳಿದಾಗ ಪುರಸಭೆಯವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ ;—ಟ್ಯಾಕ್ಸಿ ಸ್ಟ್ಯಾಂಡ್ ಹೆಸರಿನಲ್ಲಿ ಕಟ್ಟಿಸಿದಂತ ಟ್ಯಾಕ್ಸಿ ಸ್ಟ್ಯಾಂಡನ್ನು ಉಪಹಾರಗೃಹಕ್ಕಾಗಿ ಪರಿವರ್ತನ ಮಾಡುವುದಕ್ಕೆ ಹೆಲ್ತ್ ಡಿಪಾರ್ಟ್‌ಮೆಂಟಿನವರು ಒಪ್ಪಿಗೆ ಕೊಟ್ಟಿದ್ದಾರೆಯೇ ಹಿಂದೆ ಅಲ್ಲಿ ಟಾಕ್ಸಿ ಸ್ಟ್ಯಾಂಡ್ ಅಥವಾ ಷೆಡ್ ಇತ್ತು. ಆದರೂ ಹೆಚ್ಚಿಗೆ ಟ್ಯಾಕ್ಸಿಗಳು ಬರುತ್ತಿರಲಿಲ್ಲ ಅದರ ಸಲುವಾಗಿ ಡಿವಿಜನಲ್ ಕಮಿಷನರ್ ಕಡೆಗೆ ಈಗ ಕ್ಯಾಂಟೀನ್ ಅವಶ್ಯಕತೆ ಇದೆ ಎಂಬುದನ್ನು ಶಿಫಾರಸು ಮಾಡಿದರು ಅದಕ್ಕೆ ಡಿವಿಜನಲ್ ಕಮಿಷನರ್ ಆದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ.

ಶ್ರೀ ಅಜೀಜ್ ಸೇಟ್ :—ಮಾನ್ಯ ಶ್ರೀ ಭಾಸ್ಕರಶೆಟ್ಟಿಯವರು ಹೇಳುವ ಮಾತಿಗೆ ಮಾನ್ಯತೆ ಕೊಡಿ. ಸಂಬಂಧಪಟ್ಟ ಫೈಲನ್ನು ತರಿಸಿ ವಿಷಯಗಳನ್ನು ತಿಳಿದುಕೊಂಡು ಸೂಕ್ತ ತಿದ್ದುಪಡಿ ಉತ್ತರ ಕೊಡುತ್ತೀರಾ?

ಶ್ರೀ ಬಿ. ಎಂ. ಪಾಟೀಲ್ :—ಈಗ ತಿದ್ದುಪಡಿಮಾಡುವಂತ ಪ್ರಮೇಯವಿಲ್ಲ. ಪುರಸಭೆಗೆ ಹೆಚ್ಚಿನ ಆದಾಯ ಬರುತ್ತಿದೆ. ಆ ಕಡೆಯವರು ಇದು ಬಹಳ ಅವಶ್ಯಕವೆಂದು ರೆಪ್ರಸೆಂಟ್ ಮಾಡಿದ್ದಾರೆ. ಡಿವಿಜನಲ್ ಕಮಿಷನರ್ ಅವರ ಅಭಿಪ್ರಾಯದ ಪ್ರಕಾರ ಒಂದು ತೀರ್ಮಾನಕ್ಕೆ ಬಂದು ಒಂದು ನಿರ್ಧಾರ ಮಾಡಿದ್ದೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ :—ಈ ವಿಚಾರದಲ್ಲಿ ಮಾನ್ಯ ಸಭಾ ಸದಸ್ಯರು ಮತ್ತು ಪುರಸಭಾಧ್ಯಕ್ಷರು ಮನವಿ ಸಲ್ಲಿಸಿದ್ದಾರೆ. ನಿಜವಾಗಿ ಅಲ್ಲಿ ಟ್ಯಾಕ್ಸಿ ಸ್ಟ್ಯಾಂಡ್‌ನಲ್ಲಿ ಟ್ಯಾಕ್ಸಿ ನಿಲ್ಲುತ್ತಿತ್ತೆಂಬುದು ಮಾನ್ಯ ಶ್ರೀ ಇದಿನಬ್ಬನವರಿಗೆ ಗೊತ್ತಿದೆ. ಟ್ಯಾಕ್ಸಿ ಸ್ಟ್ಯಾಂಡ್ ಬೇಕು ಎಂದು ಪ್ರಾರ್ಥನೆ ಮಾಡಿರುವುದು ನಿಜವಲ್ಲವೆ?

ಶ್ರೀ ಬಿ. ಎಂ. ಪಾಟೀಲ್ :—ಅಲ್ಲಿ ಎಷ್ಟು ವರ್ಷಗಳವರೆಗೆ ಈ ಕಂಟ್ರಾಕ್ಟ್ ಕೊಟ್ಟಿದ್ದಾರೊ ಆದರಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ಟ್ಯಾಕ್ಸಿ ಸ್ಟ್ಯಾಂಡ್ ಬೇಕೆಂದು ಪುರಸಭೆಯವರ ಅಭಿಪ್ರಾಯವಿದ್ದರೆ ಅದು ಅವರಿಗೆ ಸಂಬಂಧಪಟ್ಟುದು.